

# ವಿಶ್ವದ ಅತ್ಯಂತ ನಿಗೂಢ ಬರಹ ವಾಯ್ನಿಷ್

ವಾಯ್ನಿಷ್ ಬರಹದ ಬಗ್ಗೆ ಎಷ್ಟೋ ಊಹಾಪೋಹಗಳು ನಡೆದಿದ್ದರೂ ಇಂದಿನವರೆಗೆ ಯಾರಿಗೂ ಇದು ಯಾವ ಭಾಷೆ, ಯಾವ ಲಿಪಿ ಮತ್ತು ಲೇಖಕ ಯಾರು ಎಂಬುದರ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ದೊರೆತಿಲ್ಲ. ಆದ್ದರಿಂದ ಇದನ್ನು ವಿಶ್ವದ ಅತ್ಯಂತ ನಿಗೂಢ ಹಸ್ತಪ್ರತಿ ಎನ್ನಲಾಗಿದೆ.

★ ಡಾ. ಉದಯರವಿ ಶಾಸ್ತ್ರೀ

ನಮ್ಮ ಪ್ರಪಂಚದಲ್ಲಿ ಲಿಪಿಯಿಲ್ಲದೆ ಮಾತನಾಡುವ (ತುಳುವಿನಂತಹ) ಭಾಷೆಗಳಿವೆ. ಬರೀ ಲಿಪಿ ಮಾತ್ರವಿದ್ದು ಯಾರೂ ಆಡುಭಾಷೆಯಾಗಿ ಬಳಸದ ಸಂಸ್ಕೃತ, ಗ್ರೀಕ್ ಲ್ಯಾಟಿನ್ ನಂತಹ ಮೃತ ಭಾಷೆಗಳಿವೆ. ಆದರೆ ಓದಿ ಅರ್ಥೈಸಿಕೊಳ್ಳಲಾರದಂತಹ ನಿಗೂಢ ಲಿಪಿಯೊಂದು ಇದೆ ಎಂದರೆ ನಂಬುತ್ತೀರಾ? ಅದೇ ವಾಯ್ನಿಷ್ ಹಸ್ತಪ್ರತಿಯಲ್ಲಿರುವ ಭಾಷೆ.

## ಏನಿದು ವಾಯ್ನಿಷ್ ಹಸ್ತಪ್ರತಿ?

ಸುಮಾರು 240 ಚರ್ಮದ ಹಾಳೆಗಳ ವಾಯ್ನಿಷ್ ಹಸ್ತಪ್ರತಿ ಹದಿನೈದನೆಯ ಶತಮಾನದ ಪ್ರಾರಂಭದಲ್ಲಿ ಬರೆಯಲಾಗಿತ್ತು ಎನ್ನಲಾಗಿದೆ. ಈ ಬರಹದ ಬಗ್ಗೆ ಎಷ್ಟೋ ಊಹಾಪೋಹಗಳು ನಡೆದಿದ್ದರೂ ಇಂದಿನವರೆಗೆ ಯಾರಿಗೂ ಇದು ಯಾವ ಭಾಷೆ, ಯಾವ ಲಿಪಿ ಮತ್ತು ಲೇಖಕ ಯಾರು ಎಂಬುದರ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ದೊರೆತಿಲ್ಲ. ಆದ್ದರಿಂದ ಇದನ್ನು ವಿಶ್ವದ ಅತ್ಯಂತ ನಿಗೂಢ ಹಸ್ತಪ್ರತಿ ಎನ್ನಲಾಗಿದೆ.

ಇದು ಗೂಢಲಿಪಿ (ಸೈಫರ್) ಇರಬಹುದೇ ಎಂದೂ ಅನುಮಾನವಿದೆ. ಮೊದಲನೆಯ ಹಾಗೂ ಎರಡನೆಯ ಮಹಾಯುದ್ಧಗಳಲ್ಲಿ ಶತ್ರು ಸೈನ್ಯದ ಗೂಢ ಲಿಪಿ (ಕೋಡೆಡ್ ಸಂದೇಶ)ಗಳನ್ನು ಬಿಡಿಸುತ್ತಿದ್ದ ಅಮೆರಿಕ ಮತ್ತು ಬ್ರಿಟಿಷ್ ನಿಪುಣರು ಸಹ ಈ ವಿಷಯದ ಬಗ್ಗೆ ಕೈ ಚೆಲ್ಲಿದ್ದಾರೆ. ಇದರ ಹಿಂದಿನ ರಹಸ್ಯವು ಅನೇಕ ಲೇಖಕರಿಗೆ ಕಥೆ ಕಾದಂಬರಿ ಬರೆಯಲು ಸ್ಫೂರ್ತಿ ನೀಡಿದೆ. ಅನೇಕ ಥಿಯರಿಗಳನ್ನು ಹುಟ್ಟುಹಾಕಿದೆ. 2009ರಲ್ಲಿ ಈ ಚರ್ಮದ ಹಾಳೆಗಳ ಕಾರ್ಬನ್ ಡೇಟಿಂಗ್ ಮಾಡಿದ ಆರಿಝೋನ ವಿಶ್ವ ವಿದ್ಯಾಲಯ (ಶೇ. 95 ಖಚಿತತೆಯಿಂದ) ಇದು 1404 ರಿಂದ 1438ರ ಅವಧಿಯಲ್ಲಿ ರಚಿತವಾಗಿದೆ ಎಂದು ತಿಳಿಸಿದ್ದಾರೆ. (ಅಂದರೆ, ಗುಟೆನ್‌ಬರ್ಗ್ ಪ್ರಕಟಿಸಿದ ಮೊದಲ ಬೈಬಲ್ ಪ್ರತಿಗಿಂತ 25 ವರ್ಷಗಳ ಮೊದಲು.)

ಈ ಹಸ್ತ ಪ್ರತಿಗೆ ವಾಯ್ನಿಷ್ ಎಂದು ಹೇಗೆ ಹೆಸರು ಬಂದಿತು? 1912ರಲ್ಲಿ ಈ ಹಸ್ತಪ್ರತಿಯನ್ನು ಸ್ವಾಧೀನ ಪಡಿಸಿಕೊಂಡ ವಿಲ್ಫ್ರಿಡ್ ಎಂ ವಾಯ್ನಿಷ್ ಎಂಬ